ಹಿಂದಿನ ರಾಜ್ಯಪಾಲರಾದ ಟಿ.ಎನ್. ಚತುರ್ವೇದಿಯವರ ಆಪ್ತಕಾರ್ಯದರ್ಶಿಯಾಗಿ ನಾನು ಕಾರ್ಯನಿರ್ವಹಿಸುತ್ತಿದ್ದ ಸಮಯ. 2006ರ ಜೂನ್ 5ರಿಂದ 2007ರ ಮಾರ್ಚ್ 2ರವರೆಗೆ ಮಧುಕರ್ ಅವರು ರಾಜ್ಯಪಾಲರ ಎ.ಡಿ.ಸಿ.ಯಾಗಿ ಕಾರ್ಯನಿರ್ವಹಿಸಿದರು. ಬಲ್ಲವರಿಂದ ಮಧುಕರ್‌ರವರ ವ್ಯಕ್ತಿತ್ವದ ಬಗ್ಗೆ ತಿಳಿದಿದ್ದೆ. ಹೊಸದಾಗಿ ಬಂದ ಅವರು ಯಾವ ಹಮ್ಮುಬಿಮ್ಮುಗಳಿಲ್ಲದೆ ನಮ್ಮೊಡನೆ ಬೆರೆತರು. ಒಡನಾಟ ಹೆಚ್ಚಿದಂತೆ ಖಾಕಿ ಪೋಷಾಕಿನಲ್ಲಿ ಇರುವ 'ಸಂತ'ನೊಬ್ಬನನ್ನು ಮಧುಕರ್‌ರಲ್ಲಿ ಕಂಡೆ.

ರಾಜ್ಯಪಾಲರುಗಳಿಗೆ ಇಬ್ಬರು ಅಂಗರಕ್ಷಕರು ಇರುತ್ತಾರೆ. ಒಬ್ಬರು ಕರ್ನಾಟಕ ರಾಜ್ಯದ ಐ.ಪಿ.ಎಸ್ (ಒಮ್ಮೊಮ್ಮೆ ಕೆ.ಎಸ್.ಪಿ.ಎಸ್.) ಸೇವೆಗೆ ಸೇರಿದ ಹುದ್ದೆ ಹೊಂದಿದ ಪೊಲೀಸ್ ಹಿರಿಯ ಅಧಿಕಾರಿ ಹಾಗೂ ಮತ್ತೊಬ್ಬರು ಕೇಂದ್ರ ರಕ್ಷಣಾ ಇಲಾಖೆಯ ಹಿರಿಯ ಅಧಿಕಾರಿ (ಮಿಲ್ಟ್ರಿ/ಏರ್‌ಪೋರ್ಸ್/ನೇವಿ), ಎರವಲು ಸೇವೆಯಡಿಯಲ್ಲಿ ನೇಮಕ ಹೊಂದುತ್ತಾರೆ. ಸಾಮಾನ್ಯವಾಗಿ ಎ.ಡಿ.ಸಿ. ಹುದ್ದೆಗೆ ನೇಮಕಗೊಳ್ಳುವ ಐ.ಪಿ.ಎಸ್. ಅಧಿಕಾರಿಗಳು ಪೂರ್ಣ ಇಚ್ಛೆ ಇಲ್ಲದೆ ಕಾರ್ಯನಿರ್ವಹಿಸುತ್ತಾ, ರಾಜಭವನದಿಂದ ಕಾಲ್ಕೀಳುವ ಪ್ರಯತ್ನದಲ್ಲೇ ಮಗ್ನರಾಗಿರುತ್ತಾರೆ.

ಆದರೆ ಮಧುಕರ್ ಇದಕ್ಕೆ ವಿಭಿನ್ನ. ಹಿರಿಯ ಅಧಿಕಾರಿಯಾಗಿದ್ದರೂ ಗೊಣಗದೆ, ಸರ್ಕಾರ ಕೊಟ್ಟಿದ್ದೇ ನೈವೇದ್ಯ ಎಂದು ಸ್ವೀಕರಿಸಿ ಕಾಯಾ ವಾಚಾ ಮನಸಾ ಕರ್ತವ್ಯ ನಿರ್ವಹಿಸಿದರು. ರಾಜ್ಯಪಾಲರನ್ನು ಭೇಟಿಯಾಗಲು ಬರುತ್ತಿದ್ದ ಸಂದರ್ಶಕರ ಜೊತೆ ಸೌಹಾರ್ದ ಹಾಗೂ ಆತ್ಮೀಯತೆಯಿಂದ ನಡೆದುಕೊಂಡು ಮನಗೆದ್ದಿದ್ದರು. ರಾಜಭವನದ ಸುರಕ್ಷತೆಗೆ ಒಂದು ಹೊಸ ಆಯಾಮ ನೀಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಒಂದೆರಡು ದೃಷ್ಟಾಂತಗಳು ಸದಾ ನನ್ನ ಮನಸ್ಸನ್ನು ಕಾಡುತ್ತಿರುತ್ತದೆ. ವೀರಪ್ಪನ್ ವಿರುದ್ಧದ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ ಭಾಗವಹಿಸಿ ವೀರಪ್ಪನ್‌ನನ್ನು ಸದೆಬಡಿದ ನಂತರ ಕರ್ನಾಟಕ ರಾಜ್ಯದ ಎಲ್ಲಾ ವರ್ಗದ ಪೊಲೀಸ್ ಸಿಬ್ಬಂದಿಗೆ, ಸರ್ಕಾರ ಅವರ ಸೇವೆಯನ್ನು ಪರಿಗಣಿಸಿ ಅವರವರ ಹುದ್ದೆಗೆ ಅನುಗುಣವಾಗಿ ನಗದು ಹಣ ಹಾಗೂ ನಿವೇಶನಗಳನ್ನು ಬಹುಮಾನವಾಗಿ ಮಂಜೂರು ಮಾಡಿತು. ಮಧುಕರ್ ಅವರು ಕೂಡ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರಿಂದ ಅವರಿಗೂ ಸರ್ಕಾರ ನಿವೇಶನ ಹಾಗೂ ಭಾರಿ ಮೊತ್ತದ ನಗದು ಹಣ ಮಂಜೂರು ಮಾಡಿತು. ಈ ಎರಡೂ ಬಹುಮಾನಗಳನ್ನು ಅವರು ನಯವಾಗಿ ನಿರಾಕರಿಸಲು ತೀರ್ಮಾನಿಸಿದರು. ಆ ವಿಷಯ ರಾಜ್ಯಪಾಲ ಚತುರ್ವೇದಿಯವರಿಗೆ ಗೊತ್ತಾಗಿ, ಅವರು ಮಧುಕರ್‌ರವರನ್ನು ತಮ್ಮ ಕೊಠಡಿಗೆ ಕರೆಸಿದರು. 'ನಿಮ್ಮ ತೀರ್ಮಾನದ ಬಗ್ಗೆ ನನಗೆ ಹೆಮ್ಮೆ ಇದೆ. ಎಷ್ಟು ಕೊಟ್ಟರೂ ಇನ್ನೂ ಕೊಡಬೇಕಾಗಿತ್ತು ಎಂದು ಹಪಹಪಿಸುತ್ತಿರುವವರೇ ಬಹಳ ಮಂದಿ. ಆದಾಗ್ಯೂ ನಿಮ್ಮ ಹಿತೈಷಿಯಾಗಿ ಹೇಳುತ್ತಿದ್ದೇನೆ. ನಗದು ಹಣ ಬೇಡವೆಂದರೆ ಸ್ವೀಕರಿಸಬೇಡ; ನಿನಗೆ ಇನ್ನೂ ಚಿಕ್ಕವಯಸ್ಸು, ಕುಟುಂಬವಿದೆ, ದಯವಿಟ್ಟು ನಿವೇಶನವನ್ನು ನಿರಾಕರಿಸಬೇಡ, ಸ್ವೀಕರಿಸು' ಎಂದು ಬುದ್ಧಿವಾದ ಹೇಳಿದರು. 'ಒಂದೆರಡು ದಿನ ಸಮಯ ನೀಡಿ ಸಾರ್, ಯೋಚನೆ ಮಾಡಿ ತೀರ್ಮಾನಕ್ಕೆ ಬರುತ್ತೇನೆ' ಎಂದು ಕೊಠಡಿಯಿಂದ ಹೊರಬಂದರು. ಮರುದಿನ ರಾಜ್ಯಪಾಲರನ್ನು ಭೇಟಿಯಾಗಿ, 'ವೀರಪ್ಪನ್ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ ಸರ್ಕಾರ ಒಂದೂವರೆ ಪಟ್ಟು ವಿಶೇಷ ಭತ್ಯೆ/ವೇತನವನ್ನು ಈಗಾಗಲೇ ನೀಡಿದೆ. ಸರ್ಕಾರಿ ಸೇವೆ ಎಂದಮೇಲೆ ಸರ್ಕಾರ ನೇಮಿಸಿದ ಕಡೆ ಕೆಲಸ ನಿರ್ವಹಿಸಬೇಕು. ಲಾಭ ಪಡೆಯುವ ಉದ್ದೇಶ ಸರ್ಕಾರಿ ನೌಕರರಿಗೆ ಇರಬಾರದು. ಆದ್ದರಿಂದ ನಾನು ವಿನಮ್ರತೆಯಿಂದ ಈ ಎರಡೂ ಬಹುಮಾನಗಳನ್ನು ನಿರಾಕರಿಸುತ್ತಿದ್ದೇನೆ. ತಾವು ದಯವಿಟ್ಟು ಅಪಾರ್ಥ ಮಾಡಿಕೊಳ್ಳಬಾರದು' ಎಂದು ಹೇಳಿದರು. ಇದು ಅವರ ನಿಸ್ವಾರ್ಥ ಸೇವೆಗೆ ಒಂದು ನಿದರ್ಶನ. ಯಾವ ವಿಚಾರದಲ್ಲೂ ಪ್ರಚಾರ ಬಯಸದ ಅವರು ಇದರಲ್ಲೂ ಗುಪ್ತತೆಯನ್ನು ಕಾಪಾಡಿಕೊಂಡರು. ಇದಕ್ಕಾಗಿಯೇ ನಾನು ಅವರನ್ನು ಸಂತನೆಂದು ಕರೆದದ್ದು.

ಎ.ಡಿ.ಸಿ.ಗಳಿಗೆ ರಾಜಭವನದಲ್ಲಿ ಅಧಿಕೃತ ವಸತಿಗಳಿವೆ. ಸಾಮಾನ್ಯವಾಗಿ ಎ.ಡಿ.ಸಿ.ಗಳು ಬಂದ ಕೂಡಲೇ ನಿಯೋಜಿತ ನಿವಾಸವನ್ನು ಸಜ್ಜುಗೊಳಿಸುವುದರಲ್ಲೇ ತಲ್ಲೀನರಾಗಿ, ರಾಜ್ಯಪಾಲರಿಗಿಂತ ನಾವೇನೂ ಕಡಿಮೆಯಲ್ಲ ಎಂದು ವರ್ತಿಸುವುದು ವಾಡಿಕೆ. ಆದರೆ ಮಧುಕರ್ ಇವರೆಲ್ಲರಿಗಿಂತ ಬಹುಭಿನ್ನ. ಸರಳ ಜೀವನಶೈಲಿ ರೂಢಿಸಿಕೊಂಡಿದ್ದ ಅವರ ಮನೆಯಲ್ಲಿದ್ದದ್ದು ಒಂದು ಹಳೇ ಮಂಚ, ಸಣ್ಣ ಟೇಬಲ್, ಒಂದು ಚಾಪೆ ಹಾಗೂ ಎರಡೇ ಎರಡು ಪ್ಲಾಸ್ಟಿಕ್ ಕುರ್ಚಿಗಳು – ತಮಗೊಂದು ಹಾಗೂ ಬಂದ ಅತಿಥಿಗೊಂದು.

ಮಧ್ಯಾಹ್ನದ ಊಟಕ್ಕೆಂದು ನಾನು ಹೊರಟುನಿಂತಿರುವುದನ್ನು ಕಂಡು ಹಲವಾರು ಸಲ ಬಲವಂತದಿಂದ ಅವರ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. 'ನನ್ನದು ಸಾಮಾನ್ಯ ಊಟ, ನಿಮಗಿಷ್ಟವಾಗುತ್ತೋ ಇಲ್ಲವೋ' ಎಂದು ಅಕ್ಕರೆಯಿಂದ ಉಣಬಡಿಸುತ್ತಿದ್ದರು. ಇಂತಹ ಸಾತ್ವಿಕರನ್ನು ಮರೆಯುವುದಾದರೂ ಹೇಗೆ?

ಒಮ್ಮೆ ವಿಟಿಯು ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ಬೆಳಗಾವಿಗೆ ರೈಲಿನಲ್ಲಿ ರಾಜ್ಯಪಾಲರ ಜೊತೆ ಪ್ರಯಾಣಿಸುತ್ತಿದ್ದೆವು. ಬೆಂಗಳೂರಿನ ರೈಲ್ವೆ ಸ್ಟೇಷನ್‌ನಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ಒಬ್ಬರು ಪ್ರೀತಿಯಿಂದ ಹಣ್ಣಿನ ಪ್ಯಾಕೆಟ್‌ವೊಂದನ್ನು ಮಧುಕರ್‌ರವರಿಗೆ ನೀಡಲು ಬಂದರು. ಮಧುಕರ್ ಅವರಿಗೆ ಹೇಳಿದರು. 'ಈ ಹಣ್ಣುಗಳನ್ನು ತೆಗೆದುಕೊಳ್ಳುತ್ತೇನೆ. ಆದರೆ ನನ್ನಿಂದ ಹಣ ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಬೇಡ' ಎಂದು ಹಣವನ್ನು ಆತನ ಜೇಬಿಗಿಟ್ಟರು. ಒಂದೆರಡು ಹಣ್ಣುಗಳನ್ನು ತೆಗೆದುಕೊಂಡು, 'ಉಳಿದ ಹಣ್ಣುಗಳನ್ನು ನಿಮ್ಮ ಮಕ್ಕಳಿಗೆ ಕೊಡಿ' ಎಂದು ವಾಪಸ್ಸು ನೀಡಿದರು. ಇದು ತಮ್ಮ ಕೈಕೆಳಗಿನ ಸಿಬ್ಬಂದಿ ವರ್ಗದ ಬಗ್ಗೆ ಅವರಿಗಿದ್ದ ಕಾಳಜಿ. ಹಿರಿಯ ಕಿರಿಯ ಎಂಬ ಭಾವನೆ ಅವರಲ್ಲಿ ಇರಲಿಲ್ಲ.

ಮಧುಕರ್ ಕಾರ್ಯವೈಖರಿ ಬಗ್ಗೆ ತಿಳಿದ ಅಂದಿನ ಲೋಕಾಯುಕ್ತರಾಗಿದ್ದ ಸಂತೋಷ್ ಹೆಗ್ಡೆಯವರು ಮಧುಕರ್‌ರವರನ್ನು ಲೋಕಾಯುಕ್ತಕ್ಕೆ ಕರೆದೊಯ್ದರು. ಮುಂದಿನದ್ದು ಇತಿಹಾಸ. ತಮ್ಮ 19 ವರ್ಷಗಳ ಸುದೀರ್ಘ ಸೇವಾವಧಿಯಲ್ಲಿ ತಾವು ಸೇವೆ ಮಾಡಿದ ಸ್ಥಳಗಳಲ್ಲಿ ತಮ್ಮದೇ ಛಾಪನ್ನು ಅವರು ಮೂಡಿಸಿದ್ದಾರೆ. ಕೈಗೆತ್ತಿಕೊಂಡ ಕ್ಲಿಷ್ಟ ಸಮಸ್ಯೆಗಳ ಕಾರ್ಯಾಚರಣೆಗಳನ್ನು ಚಾಚೂ ತಪ್ಪದೇ ಯಾರಿಗೂ ಹೆದರದೇ ಯಾವ ಆಮಿಷಕ್ಕೂ ಒಳಗಾಗದೆ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ.

ಸರ್ಕಾರಗಳಿಗೆ ಇಂತಹ ದಕ್ಷ, ಪ್ರಾಮಾಣಿಕ ಹಾಗೂ ಯಾವ ಮುಲಾಜಿಗೂ ಒಳಗಾಗದ ಅಧಿಕಾರಿಗಳ ಸೇವೆ ಬೇಕಾಗಿಲ್ಲದಿರುವುದು ಮಧುಕರ್ ಶೆಟ್ಟಿ ತಮ್ಮ ಸೇವಾವಧಿಯಲ್ಲಿ ಕಾರ್ಯಸಲ್ಲಿಸಿದ ಹುದ್ದೆಗಳೇ ಸಾಕ್ಷಿ. ರಾಜಕಾರಣಿಗಳ ತಾಳಕ್ಕೆ ಕುಣಿಯುವ ಅಧಿಕಾರಿಗಳು ಬೇಕು ಇಂದು. ಉನ್ನತ ವ್ಯಾಸಂಗ ಮುಗಿಸಿ, ಡಾಕ್ಟರೇಟ್ ಪದವಿ ಪಡೆದು, ಅಮೆರಿಕದಿಂದ ಕರ್ನಾಟಕ ರಾಜ್ಯದ ಸೇವೆಗೆಂದು ಮರಳಿ ಬಂದಾಗ ಸರ್ಕಾರ/ಇಲಾಖೆ ಮಧುಕರ್ ಅವರನ್ನು ಸೂಕ್ತವಾಗಿ ನಡೆಸಿಕೊಳ್ಳದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಪೊಲೀಸ್ ನೇಮಕಾತಿ ವಿಭಾಗದ ಡಿಐಜಿ ಆಗಿ ನಿರ್ವಂಚನೆಯಿಂದ ಸೇವೆ ಸಲ್ಲಿಸುತ್ತಿದ್ದ ಅವರನ್ನು, ಬಡ್ತಿ ನೆಪದಲ್ಲಿ ಮೈಸೂರಿನ ಪೊಲೀಸ್ ತರಬೇತಿಯ ಅಕಾಡೆಮಿ ನಿರ್ದೇಶಕರಾಗಿ ವರ್ಗ ಮಾಡಿದ್ದು ಇಂದಿಗೂ ಯಕ್ಷಪ್ರಶ್ನೆಯಾಗಿಯೇ ಉಳಿದಿದೆ. ಇದರಿಂದ ನೋವುಂಡ ಸ್ವಾಭಿಮಾನಿ ಮಧುಕರ್ ಕೇಂದ್ರಸರ್ಕಾರದ ಸೇವೆಗೆ ಮುಂದಾಗಿ ಹೈದರಾಬಾದಿಗೆ ಹೊರಟು ನಿಂತರು. ಇಂತಹ ಪ್ರತಿಭಾವಂತನಿಗೆ ನಮ್ಮಲ್ಲಿಯೇ ಅರ್ಹತೆಗೆ ತಕ್ಕ ಹುದ್ದೆ ನೀಡಿದ್ದಲ್ಲಿ 47 ವರ್ಷದ ಈ ಅಧಿಕಾರಿ ಎಚ್1ಎನ್1 ಸೋಂಕು ತಗುಲದೆ ಉಳಿಯುತ್ತಿದ್ದರೇನೋ? ಈಗ ಮಧುಕರ್ ಅವರ ಬಗ್ಗೆ ಎಲ್ಲಿಲ್ಲದ ಪ್ರೇಮ, ಅಭಿಮಾನ ಹಾಗೂ ಅವರ ಕಾರ್ಯಶೈಲಿಯ ಬಗ್ಗೆ ಕೊಂಡಾಡುತ್ತಾ ಅವರ ಸ್ಮಾರಕವೊಂದನ್ನು ನಿರ್ಮಿಸಬೇಕು, ಪೊಲೀಸ್ ಅಕಾಡೆಮಿ ಒಂದಕ್ಕೆ ಅವರ ಹೆಸರನ್ನಿಡಬೇಕು ಎಂದು ಬಡಬಡಿಸುತ್ತಿರುವ ಸೋಗಲಾಡಿ ರಾಜಕಾರಣಿಗಳಿಗೆ ಒಂದು ಗೊಡ್ಡು ಸಲಾಮ್.

ನನ್ನ 40 ವರ್ಷಗಳ ಸುದೀರ್ಘ ಸೇವೆಯಲ್ಲಿ ಇಂತಹ ದಕ್ಷ, ನಿಷ್ಠಾವಂತ ಅಧಿಕಾರಿಯನ್ನು ನಾನು ಕಂಡಿಲ್ಲ. ದುರ್ಬೀನ್ ಹಾಕಿ ನೋಡಿದರೂ ಮಧುಕರ್‌ರವರಂತಹ ಮೇರು ಅಧಿಕಾರಿ ಸಿಗುವುದಿಲ್ಲ. ಅವರು ಎಷ್ಟು ಜನಪ್ರಿಯರಾಗಿದ್ದರು ಎನ್ನುವುದಕ್ಕೆ ಅವರ ಅಂತಿಮ ನಮನ–ಸಂಸ್ಕಾರದಲ್ಲಿ ಸಾಗರೋಪಾದಿಯಲ್ಲಿ ಬಂದು ಸೇರಿದ್ದ ಎಲ್ಲಾ ವರ್ಗದ ಜನಸಾಗರವೇ ಸಾಕ್ಷಿ.

ಸರ್ಕಾರ ಅವರ ಸ್ಮಾರಕ ಕಟ್ಟಲಿ ಬಿಡಲಿ – ಅವರು ನಮ್ಮೆಲ್ಲರ ಹೃದಯದಲ್ಲಿ ಸದಾ ಅಮರರು. ಅವರ ಜೀವನಶೈಲಿ, ಕಾರ್ಯಕ್ಷಮತೆ ಹಾಗೂ ನಡೆದುಬಂದ ದಾರಿ ಇಂದಿನ ಯುವ ಪೊಲೀಸ್ ಸಿಬ್ಬಂದಿಗೆ ಹಾಗೂ ಯುವ ತಲೆಮಾರಿಗೆ ಮಾದರಿಯಾದುದು.